ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ವಿಭಾಗ
ಜಿ.ಕೆ.ವಿ.ಕೆ., ಬೆಂಗಳೂರು-560065
*** ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ ***

ದಿನಾಂಕ: 06-11-2015

ಬೆಂಗಳೂರು ನಗರ ಜಿಲ್ಲೆಗೆ ಸೀಮಿತವಾಗಿದೆ

ಈ ವಾರದ ಮುನ್ಸೂಚನೆ (ದಿನಾಂಕ 07.11.15 –11.11.15ವರೆಗೆ)

	07.11.15	08.11.15	09.11.15	10.11.15	11.11.15
ಮಳೆ (ಮಿ ಮಿ)	0	0	0	4	30
ಗರಿಷ್ಠ ಉಷ್ಣಾಂಶ(ಡಿ.ಸೆ.)	29	30	30	31	29
ಕನಿಷ್ಠ ಉಷ್ಣಾಂಶ (ಡಿ.ಸೆ.)	19	20	20	21	20
ಮೋಡ (ಪ್ರಮಾಣ)	4	4	5	3	8
ಆರ್ದ್ರತೆ ೭.೨೦ ಬೆ (ಶೇ)	87	84	86	88	96
ಆರ್ದ್ರತೆ ೨.೨೦ ಮ (ಶೇ)	62	52	58	56	79
ಗಾಳಿಯ ವೇಗ (ಕಿ.ಮಿ/ಗಂಟೆಗೆ)	2	4	4	4	2
ಗಾಳಿಯ ದಿಕ್ಕು (ಡಿಗ್ರಿ)	30	50	40	20	90

ಮುಂದಿನ ದಿನಗಳಲ್ಲಿ ಹಗುರದಿಂದ ಸಾದಾರಣ ಮಳೆಯಾಗುವ ಸಂಭವವಿದೆ. ದಿನದ ಗರಿಷ್ಠ ಉಷ್ಣಾಂಶ **29.0-31.0^{o}C** ಮತ್ತು ಕನಿಷ್ಠ **19.0 -21.0^{o}C** ಇರುವ ಸಾಧ್ಯತೆ ಇದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ **75-94 %** ಇದ್ದು ಮಧ್ಯಾಹ್ನ **53-77 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **2-4** ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ತೊಗರಿ ಬೆಳೆಯಲ್ಲಿ ಸೊರಗು ರೋಗದ ಹತೋಟಿಗೆ ಕಾರ್ಬೆನ್‌ಡೈಜಿಮ್@ 2 ಮಿ.ಲೀ ನೀರಿನಲ್ಲಿ ಬೆರೆಸಿ ಸಿಂಪಡಿಸಿ.
- ಮಣ್ಣಿನತೇವಾಂಶದ ಸಂರಕ್ಷಣೆಗಾಗಿಕಿತ್ತಂತಹ ಕಳೆಗಳು ಮತ್ತು ಬದುಗಳಲ್ಲಿ ಬೆಳೆದಿರುವ ಗ್ಲಿರೀಸಿಡಿಯ (ಹಸಿರೆಲೆ ಗೊಬ್ಬರದಗಿಡ) ಹಾಗೂ ಹುಲ್ಲನ್ನು ಕತ್ತರಿಸಿ ಸಾಲುಗಳ ಮಧ್ಯದಲ್ಲಿ ಭೂ-ಹೊದಿಕೆಯಾಗಿ ಹರಡುವುದು.
- ಕೃಷಿಹೊಂಡ, ನಾಲಾ ಬದು, ಚೆಕ್‌ಡ್ಯಾಮ್ ಹಾಗೂ ಇನ್ನಿತರೆ ನೀರು ಶೇಖರಣಾ ರಚನೆಗಳಲ್ಲಿ ಶೇಖರಣವಾಗಿರುವ ಮಳೆಯ ನೀರನ್ನು ಬೆಳೆಗಳ ಜೀವ ಸಂರಕ್ಷಣಾ ನೀರಾವರಿಯಾಗಿಉಪಯೋಗಿಸಬಹುದು.
- ಶಿಫಾರಿಸ್ಸಿಗಿಂತ ಹೆಚ್ಚು ಸಂಖ್ಯೆ ಹೊಂದಿರುವ ಬೆಳೆಗಳ ಸಂಖ್ಯೆಯನ್ನು ಕಡಿಮೆಗೊಳಿಸಿ ಮತ್ತು ಅವುಗಳನ್ನು ಜಾನುವಾರುಗಳಿಗೆ ಮೇವಿಗಾಗಿ ಬಳಸಬಹುದು.
- **ಹಿಂಗಾರು ಮಳೆಯ ಬೆಳೆ ಪದ್ಧತಿ/ಉತ್ಪಾದನಾ ವ್ಯವಸ್ಥೆ**

  1. **ಕೆಂಪು ಮಣ್ಣಿಗೆ ಸೂಕ್ತವಾದ ಬೆಳೆಗಳು:** ಶಕ್ತಿಮಾನ್ ಮುಸುಕಿನ ಜೋಳ (ಗಂಗಾ-11, ಡೆಕ್ಕನ್-103, ವಿಜಯ ಕಾಂಪೋಸಿಟ್, ಎನ್.ಎ,ಹೆಚ್-1137), ಪಾಪ್‌ಕಾರ್ನ್ (ಅಂಬರ್), ಸೂರ್ಯಕಾಂತಿ (ಮಾರ್ಡೆನ್, ಕೆ.ಬಿ.ಎಸ್.ಹೆಚ್-1, 41,42,44 ಮತ್ತು 53), ರಾಗಿ (ಇಂಡಾಫ್-7, ಇಂಡಾಫ್-9, ಇಂಡಾಫ್-15 ಮತ್ತು ಎಮ್.ಎಲ್-365) ಮತ್ತುಅವರೆ (ಹೆಚ್.ಎ.-3, ಹೆಚ್-4).

     - ರಾಗಿ ಬೆಳೆಗೆ ಸಾರಜನಕವನ್ನು ಮೇಲುಗೊಬ್ಬರವಾಗಿಕೊಡುವುದು.
     - ಸಸಿಮಡಿಯಲ್ಲಿರುವ ರಾಗಿ ಪೈರನ್ನು ನಾಟಿ ಮಾಡುವುದು.
     - ಮರಳು ಮಿಶ್ರಿತ ಭೂಮಿಯಲ್ಲಿ ಅಲಸಂದೆ, ಹುರುಳಿ, ಅಲ್ಪಾವಧಿ ಸೂರ್ಯಕಾಂತಿ, ಹುಚ್ಚೆಳ್ಳು ಅಥವಾ ಹರಳು ಬೆಳೆಗಳನ್ನು ಬಿತ್ತನೆಮಾಡಬಹುದು.

2. **ಗದ್ದೆ ಬಯಲು ಪ್ರದೇಶ (ಭತ್ತದಕಟಾವಿನ ನಂತರ):**

- ಮುಂಗಾರು ಮಳೆಯಲ್ಲಿ ಬಿತ್ತನೆ ಮಾಡಿದ ಬೆಳೆಗಳು ಕೊಯ್ಲಾದ ಪ್ರದೇಶಗಳಲ್ಲಿ ಅನುಕೂಲಕರತೇವಾಂಶವಿರುವ ಭೂಮಿಯಲ್ಲಿಕಡಲೆಯನ್ನು ಬಿತ್ತನೆ ಮಾಡಬಹುದು.
- ಭತ್ತದಕೊಯ್ಲಿನ ನಂತರಪೂತೇವಾಂಶವಿರುವ ಕಡೆಗಳಲ್ಲಿ ಕಡಲೆಯನ್ನು ಬಿತ್ತನೆ ಮಾಡಬಹುದು.

ನೋಡಲ್ ಅಧಿಕಾರಿ:
ಕೃ.ವಿ.ವಿ, ಜಿ.ಕೆ.ವಿ.ಕೆ
ಬೆಂಗಳೂರು